Report DGM Causal

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ವಿವಿಧ ನಿಗಮಗಳ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಪೂರೈಕೆಯಾದ ಸಾಮಗ್ರಿಗಳನ್ನು ಮೂರನೇ ತಪಾಸಣಾ ಸಂಸ್ಥೆಯವರು ತಪಾಸಣೆ ಮಾಡಿದ ನಂತರ ಉಪಪ್ರಧಾನ ವ್ಯವಸ್ಥಾಪಕರು,(DGM) ಇವರಿಂದ ಕೈಗೊಳ್ಳುವ 10% ಪೂರ್ವೋತ್ತರ ತಪಾಸಣೆ ಪದ್ಧತಿಯನ್ನು ರದ್ದು ಪಡಿಸುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:08.08.2022ರಂದು ನಡೆದ ಸಭೆ.

****

**ಪ್ರಸ್ತಾವನೆ:**

ದಿನಾಂಕ:08.08.2022ರಂದು ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ಚರ್ಚಿಸಲಾಗಿದ್ದು, ಸದರಿ ಯೋಜನೆಯಲ್ಲಿನ ಲೋಪದೋಷಗಳ ಬಗ್ಗೆ ಪರಿಶೀಲಿಸಲಾಯಿತು. ಅದರಂತೆ, ತಾಂತ್ರಿಕ ನೈಪುಣ್ಯತೆ ಹೊಂದಿರುವ ಮೂರನೇ ತಪಾಸಣಾ ಸಂಸ್ಥೆಯು ವರದಿ ನೀಡಿದ ನಂತರ ಯಾವುದೇ ತಾಂತ್ರಿಕ ನೈಪುಣ್ಯತೆ ಹಾಗೂ ಅರ್ಹತೆ ಹೊಂದಿರದ ಉಪ ಪ್ರಧಾನ ವ್ಯವಸ್ಥಾಪಕರಿಂದ ಶೇ.10ರಷ್ಟು ಮರು ತಪಾಸಣೆ ನಡೆಸುವ ಪದ್ಧತಿಯು ಸೂಕ್ತವಾಗಿರುವುದಿಲ್ಲ. ಈ ಬಗ್ಗೆ ಗುತ್ತಿಗೆದಾರರಿಂದಲೂ ಸಹ ಆಕ್ಷೇಪಣೆಗಳು ವ್ಯಕ್ತವಾಗಿರುವುದನ್ನು ಗಮನಿಸಲಾಗಿರುತ್ತದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಬಡ ರೈತರಿಗೆ ಕೊಳವೆ ಬಾವಿ ಕೊರೆಸಿ ಪಂಪ್ ಮತ್ತು ಪೂರಕ ಸಾಮಗ್ರಿಗಳನ್ನು ಅಳವಡಿಸಿ ವಿದ್ಯುದ್ದೀಕರಣಗೊಳಿಸುವ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಗುತ್ತಿಗೆದಾರರಿಂದ ಪೂರೈಕೆಯಾದ ಸಾಮಗ್ರಿಗಳನ್ನು ಮೂರನೇ ತಪಾಸಣಾ ಸಂಸ್ಥೆಯವರು ಪೂರ್ವ ಹಾಗು ಪೂರ್ವೋತ್ತರ ಪರೀಕ್ಷೆ ಮಾಡಿ ಜಿಲ್ಲಾ ಮತ್ತು ತಾಲೂಕು ಅಭಿವೃದ್ಧಿ ಅಧಿಕಾರಿಗಳು ಫಲಾನುಭವಿ ರೈತನ ಸಮ್ಮುಖದಲ್ಲಿ ಸರಬರಾಜಿನ ಅಂಕಿ ಸಂಖ್ಯೆ ಪ್ರಮಾಣವನ್ನು ಮತ್ತೊಮ್ಮೆ ಖಚಿತ ಪಡಿಸಿಕೊಂಡು ತದಂತರದಲ್ಲಿ ಉಪ ಪ್ರಧಾನ ವ್ಯವಸ್ಥಾಪಕ (DGM) ಅವರಿಂದ 10% ಪೂರ್ವೋತ್ತರ ತಪಾಸಣೆ ವರದಿ ಪಡೆದ ನಂತರ ಗುತ್ತಿಗೆದಾರರ ಬಿಲ್ಲುಗಳನ್ನು ಸಂದಾಯ ಮಾಡಲು ಆದೇಶಿಸಲಾಗಿರುತ್ತದೆ.

ಸದರಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಗುತ್ತಿಗೆದಾರರಿಂದ ಪೂರೈಕೆಯಾದ ಸಾಮಗ್ರಿಗಳನ್ನು ಅದಾಗಲೇ ಮೂರನೇ ತಪಾಸಣಾ ಸಂಸ್ಥೆಯವರು ಪೂರ್ವ ಹಾಗೂ ಪೂರ್ವೋತ್ತರ ಪರೀಕ್ಷೆ ನಡೆಸಿ ವರದಿ ಸಲ್ಲಿಸುತ್ತಿರುವುದರಿಂದ ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಫಲಾನುಭವಿ ರೈತರ ಸಮ್ಮುಖದಲ್ಲಿ ಸರಬರಾಜಿನ ಅಂಕಿ ಸಂಖ್ಯೆಯ ಪ್ರಮಾಣವನ್ನು ಮತ್ತೊಮ್ಮೆ ಖಚಿತಪಡಿಸಿಕೊಳ್ಳುತ್ತಿರುತ್ತಾರೆ.

ತಾಂತ್ರಿಕ ನೈಪುಣ್ಯತೆ ಹಾಗೂ ಅರ್ಹತೆ ಹೊಂದಿರುವ ಮೂರನೇ ತಪಾಸಣಾ ಸಂಸ್ಥೆಯವರು ತಪಾಸಣೆ ಮಾಡಿ ವರದಿ ನೀಡುತ್ತಿರುವುದರಿಂದ ಅದೇ ಸಾಮಗ್ರಿಗಳ ಮರು ತಪಾಸಣೆಯನ್ನು ಉಪ ಪ್ರಧಾನ ವ್ಯವಸ್ಥಾಪಕರಿಂದ 10% ಪೂರ್ವೋತ್ತರ ತಪಾಸಣೆ ನಡೆಸಿ ಗುತ್ತಿಗೆದಾರರ ಬಿಲ್ಲುಗಳನ್ನು ಸಂದಾಯ ಮಾಡುವಲ್ಲಿ ಆಗುತ್ತಿರುವ ಕಾರ್ಯ ವಿಳಂಬವನ್ನು ತಪ್ಪಿಸುವ ಸದುದ್ದೇಶದಿಂದ ಹಾಗೂ ಯೋಜನೆಯಲ್ಲಿ ಪಾರದರ್ಶಕತೆಯನ್ನು ತರುವ ನಿಟ್ಟಿನಲ್ಲಿ ಹಾಗೂ ಉಪಪ್ರಧಾನ ವ್ಯವಸ್ಥಾಪಕರ ಕಾರ್ಯದ ಒತ್ತಡವನ್ನು ಕಡಿಮೆಗೊಳಿಸುವ ದಿಕ್ಕಿನಲ್ಲಿ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 96 ಎಸ್‌ಡಿಸಿ 2022, ಬೆಂಗಳೂರು, ದಿನಾಂಕ:09.09.2022

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಬಡ ರೈತರಿಗೆ ಕೊಳವೆ ಬಾವಿ ಕೊರೆಸಿ ಪಂಪ್ ಮತ್ತು ಪೂರಕ ಸಾಮಗ್ರಿಗಳನ್ನು ಅಳವಡಿಸಿ ವಿದ್ಯುದ್ದೀಕರಣಗೊಳಿಸುವ ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ, ಗುತ್ತಿಗೆದಾರರಿಂದ ಪೂರೈಕೆಯಾದ ಸಾಮಗ್ರಿಗಳನ್ನು ಅದಾಗಲೇ ಮೂರನೇ ತಪಾಸಣಾ ಸಂಸ್ಥೆಯವರು ಪೂರ್ವ ಹಾಗೂ ಪೂರ್ವೋತ್ತರ ಪರೀಕ್ಷೆ ನಡೆಸಿ ವರದಿ ಸಲ್ಲಿಸುತ್ತಿರುವುದರಿಂದ, ಜಿಲ್ಲಾ ಹಾಗೂ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಫಲಾನುಭವಿ ರೈತರ ಸಮ್ಮುಖದಲ್ಲಿ ಸರಬರಾಜಿನ ಅಂಕಿ ಸಂಖ್ಯೆಯ ಪ್ರಮಾಣವನ್ನು ಮತ್ತೊಮ್ಮೆ ಖಚಿತಪಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ಅದೇ ಸಾಮಗ್ರಿಗಳ ಮರು ತಪಾಸಣೆಯನ್ನು ತಾಂತ್ರಿಕ ನೈಪುಣ್ಯತೆ ಇಲ್ಲದೇ ಇರುವ ಉಪ ಪ್ರಧಾನ ವ್ಯವಸ್ಥಾಪಕರಿಂದ 10% ಪೂರ್ವೋತ್ತರ ತಪಾಸಣೆ ನಡೆಸಿ ವರದಿ ನೀಡುವುದನ್ನು ಕೆಳಕಂಡ ಷರತ್ತಿಗೊಳಪಟ್ಟು ರದ್ದುಪಡಿಸಿ ಆದೇಶಿಸಿದೆ.

ಮುಂದುವರಿದು, ವಿಭಾಗವಾರು (ಪ್ರತ್ಯೇಕವಾಗಿ 4 ವಿಜಿಲೆನ್ಸ್ ತಂಡಗಳನ್ನು (ಸಮಾಜ ಕಲ್ಯಾಣ ಇಲಾಖೆಯ ಉನ್ನತ ಅಧಿಕಾರಿಗಳನ್ನು ಒಳಗೊಂಡಂತೆ) ರಚಿಸಿ ವಿಭಾಗವಾರು ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಲು ಅಗತ್ಯ ಕ್ರಮವಹಿಸುವುದು ಹಾಗೂ ನಿಯಮಗಳ ಉಲ್ಲಂಘನೆ ಕಂಡುಬಂದಲ್ಲಿ ತುರ್ತು ಶಿಸ್ತು ಕ್ರಮವಹಿಸಲು ಶಿಫಾರಸ್ಸು ಮಾಡುವುದು.

ಷರತ್ತುಗಳು:

1. ಸದರಿ ಆದೇಶದನ್ವಯ ಗಂಗಾ-ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಸಂಬಂಧಪಟ್ಟ ನಿಗಮಗಳು ಕಾರ್ಯನಿರ್ವಹಿಸತಕ್ಕದ್ದು.
2. ಸದರಿ ಆದೇಶವು ತಕ್ಷಣದಿಂದ ಜಾರಿಗೆ ಬರತಕ್ಕದ್ದು ಹಾಗೂ ಈ ಆದೇಶವು ಈಗಾಗಲೇ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಪ್ರಸ್ತುತ ಕೊರೆಸುತ್ತಿರುವ ಕೊಳವೆಬಾವಿ ಹಾಗೂ ಪಂಪ್ ಸೆಟ್ ಗಳಿಗೂ ಸಹ ಅನ್ವಯಿಸುತ್ತದೆ (ಹಿಂದಿನ ವರ್ಷಗಳ ಭೌತಿಕ ಗುರಿಯಂತೆ).

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ವಿ.ಪ್ರಕಾಶ್ 09.09.2022

(ವಿ. ಪ್ರಕಾಶ್ )
ಸರ್ಕಾರದ ಉಪ ಕಾರ್ಯದರ್ಶಿ-3
ಸಮಾಜ ಕಲ್ಯಾಣ ಇಲಾಖೆ.

09/09/2022

ಇವರಿಗೆ,

1. ಮಹಾಲೇಖಪಾಲರು( ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ.
4. ವ್ಯವಸ್ಥಾಪಕ ನಿರ್ದೇಶಕರು, ಸಂಬಂಧಪಟ್ಟ ನಿಗಮಗಳು, ಸಮಾಜ ಕಲ್ಯಾಣ ಇಲಾಖೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.

****

Scanned with CamScanner